

# ಹೃದಯದ ಮಾತಿನ ಆ್ಯಡ್ ಗುರು

ಪ್ರವೀಣ ಕುಲಕರ್ಣಿ

ದಶಕಗಳ ಹಿಂದಿನ ಆ ಕೆಲವು ಜಾಹೀರಾತು ದೃಶ್ಯಗಳ ತುಣುಕುಗಳು ನಮ್ಮ ಮನದಂಗಳದಿಂದ ಎಂದಿಗೂ ಮಾಸುವುದೇ ಇಲ್ಲ. ‘ಯೇ ದಿಲ್ ಮಾಂಗೇ ಮೋರ್’ ಎನ್ನುವ ಮಾತನ್ನು ಪೆಪ್ಸಿ ಬಾಟಲಿ ಹಿಡಿದು ಅಮಿತಾಭ್ ಬಚ್ಚನ್ ಮತ್ತು ಸಚಿನ್ ತೆಂಡೂಲ್ಕರ್ ಹೇಳಿದ್ದು ಕೂಡ ಅಂತಹ ದೃಶ್ಯಗಳಲ್ಲಿ ಒಂದು. ಈ ಸೃಜನಶೀಲ ಜಾಹೀರಾತಿನ ಹಿಂದಿದ್ದವರು ಪ್ರಹ್ಲಾದ್ ಕಕ್ಕರ್ ಎಂಬ ಅದ್ಭುತ ಫಿಲ್ಮ್ ಮೇಕರ್ ಮತ್ತು ಜಾಹೀರಾತುಗಳ ನಿರ್ಮಾತೃ. ಪೆಪ್ಸಿ ಮಾತ್ರವಲ್ಲ, ಬ್ರಿಟಾನಿಯಾ, ಮ್ಯಾಗಿ ಜಾಹೀರಾತುಗಳನ್ನು ರೂಪಿಸಿದ್ದು ಕೂಡ ಅವರೇ. ಸದ್ಯ 75ರ ಗಡಿಯಲ್ಲಿರುವ ಈ ಅಜ್ಜನ ವ್ಯಕ್ತಿತ್ವ ಅವರ ದೃಶ್ಯ ರೂಪಕಗಳಷ್ಟೇ ವರ್ಣರಂಜಿತ. ಇತ್ತೀಚೆಗಷ್ಟೇ ‘ಆ್ಯಡ್ ಮ್ಯಾನ್, ಮ್ಯಾಡ್ ಮ್ಯಾನ್’ ಎಂಬ ಅವರ ಬದುಕಿನ ನೆನಪುಗಳ ಕಥನ ಬಿಡುಗಡೆಯಾಗಿದೆ. ಈ ಕಥನದ ಪ್ರತಿಪುಟದಲ್ಲೂ ಕಾಮನಬಿಲ್ಲು ಕಮಾನುಕಟ್ಟಿದೆ.

ಕಕ್ಕರ್ ಅವರು ಓದಿದ್ದು ಅರ್ಥಶಾಸ್ತ್ರವನ್ನು. ಜಾಹೀರಾತು ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿ ಕೆಲಸ ಆರಂಭಿಸಿದ್ದ ಅವರು, ದೆಹಲಿ ಸೇರಿದಂತೆ ಹಲವೆಡೆ ಸುತ್ತಾಡಿ ಕೊನೆಗೆ ಮುಂಬೈಯಲ್ಲಿ ತಳವೂರಿದರು. ಅಲ್ಲಿ ಹೆಸರಾಂತ ನಿರ್ದೇಶಕ ಶ್ಯಾಮ್ ಬೆನಗಲ್ ಅವರ ಸಂಪರ್ಕಕ್ಕೆ ಬಂದರು. ಅವರನ್ನು ಗುರುವಾಗಿ ಸ್ವೀಕರಿಸಿದ ಕಕ್ಕರ್, ಸಹಾಯಕ ನಿರ್ದೇಶಕರಾಗಿ ಅವರ ಗರಡಿಯಲ್ಲಿ ಪಳಗಿದರು. ಅಂಕುರ್, ಮಂಥನ್, ಭೂಮಿಕಾ ಚಿತ್ರಗಳಲ್ಲಿ ಬೆನಗಲ್ ಅವರ ಸಹಾಯಕರಾಗಿ ದುಡಿದರು. 1977ರಲ್ಲಿ ಅವರು ಸ್ಥಾಪಿಸಿದ ಜೆನೆಸಸ್ ಫಿಲ್ಮ್ ಪ್ರೊಡಕ್ಷನ್ ಕಂಪನಿ ಟಿ.ವಿ. ಜಾಹೀರಾತುಗಳಿಗೆ ಹೊಸ ಭಾಷ್ಯವನ್ನೇ ಬರೆಯಿತು. ‘ಮೂವತ್ತು ಸೆಕೆಂಡ್‌ಗಳಲ್ಲಿ ಕಥೆಯೊಂದನ್ನು ಆಕರ್ಷಕವಾಗಿ ಕಟ್ಟಿಕೊಡುವುದು ತುಂಬಾ ಸವಾಲಿನ ಕೆಲಸ. ಇಂತಹ ಸವಾಲನ್ನು ನಾನು ಸದಾ ಆನಂದಿಸಿದ್ದೇನೆ’ ಎನ್ನುತ್ತಾರೆ ಕಕ್ಕರ್. ‘ಆ್ಯಡ್ ಗುರು’ ಎಂದೇ ಹೆಸರಾಗಿರುವ ಅವರು, ಜಾಹೀರಾತುಗಳಲ್ಲಿ ‘ಪ್ರಾದೇಶಿಕ ಭಾರತೀಯತೆ’ಯನ್ನು ಸಮರ್ಥವಾಗಿ ತುಂಬಿದವರು. ನಾಲ್ಕು ದಶಕಗಳ ಕಾಲ ಜಾಹೀರಾತು ನಿರ್ಮಾಣ ಉದ್ಯಮವನ್ನು ಅಕ್ಷರಶಃ ಆಳಿದ ಕಕ್ಕರ್, ಹಲವು ಸ್ಮರಣೀಯ ದೃಶ್ಯ ಕಥಾನಕಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಬ್ರ್ಯಾಂಡಿಂಗ್ ಕ್ಷೇತ್ರದಲ್ಲಿ ಕಕ್ಕರ್ ಅವರನ್ನು ಮೀರಿಸುವವರಿಲ್ಲ ಎಂದು 1990ರ ದಶಕದಲ್ಲೇ ಹೆಸರಾಗಿದ್ದವರು ಅವರು. ಪೆಪ್ಸಿ, ಬ್ರಿಟಾನಿಯಾ, ಮ್ಯಾಗಿ ಮಾತ್ರವಲ್ಲದೆ ನೆಸ್ಲೆ, ಗೋಲ್ಡ್‌ಸ್ಪಾಟ್, ಲಿಮ್ಕಾದಂತಹ ಬ್ರ್ಯಾಂಡ್‌ಗಳ ನಿರ್ಮಾಣದಲ್ಲೂ ಅವರ ಕೈಚಳಕ ಕೆಲಸ ಮಾಡಿದೆ. ‘ಕಾಮಸೂತ್ರ’ದ ಜಾಹೀರಾತುಗಳ ನಿರ್ಮಾಪಕ ಕೂಡ ಇವರೇ ಆಗಿದ್ದಾರೆ.

ಕಕ್ಕರ್ ಅವರ ಮನೆತನದ ಹಿನ್ನೆಲೆಯೂ ವಿಶಿಷ್ಟವಾಗಿದೆ. ಅವರ ತಂದೆ ಸ್ವಾತಂತ್ರ್ಯಪೂರ್ವದಲ್ಲಿ ಕರ್ನಲ್ ಆಗಿದ್ದರು. ಅವರಿದ್ದ ಸೇನಾ ತುಕಡಿ ಪಾಕಿಸ್ತಾನದಲ್ಲಿ ಬಿಡಾರ ಹೂಡಿತ್ತು. ಕಕ್ಕರ್ ಅವರ ಅಮ್ಮನ ಅಮ್ಮ ಬರ್ಮಾ ಮೂಲದವರು, ಅಮ್ಮನ ಅಪ್ಪ ಮಹಾರಾಷ್ಟ್ರದವರು. ಈ ‘ಆ್ಯಡ್ ಗುರು’ ಪದವಿ ಅಧ್ಯಯನ ಪೂರೈಸಿದ್ದು ಪುಣೆಯ ಹೆಸರಾಂತ ಫರ್ಗ್ಯೂಸನ್ ಕಾಲೇಜಿನಿಂದ. ಓದಿದ್ದು ಅರ್ಥಶಾಸ್ತ್ರವನ್ನಾದರೂ ಚಿತ್ತ ಹರಿದಿದ್ದು ದೃಶ್ಯ ಮಾಧ್ಯಮದತ್ತ. ಜಾಹೀರಾತು ನಿರ್ಮಾಣ ಕಂಪನಿ ಸ್ಥಾಪನೆಗಷ್ಟೇ ಅವರ ಆಸಕ್ತಿ ತಣಿಯಲಿಲ್ಲ. ಲಕ್ಷದ್ವೀಪದಲ್ಲಿ ಲಾಕಾಡೈವ್ಸ್ ಎಂಬ ಸ್ಕೂಬಾ ಡೈವಿಂಗ್ ಸ್ಕೂಲ್ ತೆರೆದರು. ರೆಸ್ಟೋರೆಂಟ್‌ಗಳನ್ನೂ ಅವರು ಆರಂಭಿಸಿದರು. ಯಾವುದೇ ಉದ್ಯಮದಲ್ಲಿ ಕೈಹಾಕಿದರೂ ಯಶಸ್ಸನ್ನು ಬೆನ್ನಿಗೆ ಕಟ್ಟಿಕೊಂಡು ಓಡಾಡಿದರು.

ಕಕ್ಕರ್ ಅವರ ‘ಆ್ಯಡ್ ಮ್ಯಾನ್, ಮ್ಯಾಡ್ ಮ್ಯಾನ್’ ಕೃತಿಯಲ್ಲಿ ಹಲವು ರೋಚಕ ಕಥಾನಕಗಳ ಸಂತೆಯೇ ನೆರೆದಿದೆ. ಪತ್ನಿ ಮಿತಾಲಿಗಿಂತ ಚೆನ್ನಾಗಿ ಅವರು ಅಡುಗೆ ಮಾಡುತ್ತಾರಂತೆ. ಥರಾವರಿ ಆಹಾರ ತಿನಿಸುಗಳ ಮೇಲೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಕಕ್ಕರ್, ಪುಸ್ತಕ ಪ್ರೇಮಿ. ಬಿಡುವಿನ ವೇಳೆಯನ್ನು ಸ್ವಲ್ಪವೂ ವ್ಯರ್ಥಮಾಡದೆ ಪುಸ್ತಕ ಓದುವುದರಲ್ಲಿ ಕಳೆಯುತ್ತಾರೆ ಎಂದು ಅವರ ಕುಟುಂಬದವರು ಹೇಳುತ್ತಾರೆ. ಕಕ್ಕರ್ ಒಬ್ಬ ಅದ್ಭುತ ಕಥೆಗಾರ ಎನ್ನುವುದು ಅವರ ಸ್ನೇಹಿತರ ಹೇಳಿಕೆ. ಬಲು ತಮಾಷೆ ಸ್ವಭಾವದ ಅವರು, ತಮ್ಮ ಅನುಭವಗಳಿಗೆ ತಮಾಷೆಯ ಲೇಪನ ಮಾಡಿ ನೆನಪುಗಳನ್ನು ಕಟ್ಟಿಕೊಡುತ್ತಾರೆ. ಬಾಳ ಸಂಧ್ಯಾಕಾಲದಲ್ಲಿದ್ದರೂ ಯುವಕರನ್ನೂ ನಾಚಿಸುವಂತಹ ದಿನಚರಿಯಿಂದ ಕ್ರಿಯಾಶೀಲರಾಗಿದ್ದಾರೆ. ಅಂದಹಾಗೆ, ಅವರೊಬ್ಬ ಕುದುರೆ ಸವಾರ ಕೂಡ ಹೌದು. ಕಕ್ಕರ್ ತಮಗೆ ಅನಿಸಿದ್ದನ್ನು ನಿರ್ಭೀತಿಯಿಂದ ಹೇಳುವುದುಂಟು. ‘ಅಮಿತಾಭ್ ಬಚ್ಚನ್ ಅವರ ಹೆಸರನ್ನು ಗಿನ್ನೆಸ್ ದಾಖಲೆಗೆ ಸೇರ್ಪಡೆ ಮಾಡಬೇಕು. ಏಕೆಂದರೆ, ಸತತ 17 ಫ್ಲಾಪ್ ಸಿನಿಮಾಗಳ ಬಳಿಕವೂ ಅವರು ಸಿನಿಮಾ ಉದ್ಯಮದಲ್ಲಿ ಉಳಿದಿದ್ದಾರೆ’ ಎಂಬ ಅವರ ಹೇಳಿಕೆ ಭಾರಿ ವಿವಾದವನ್ನು ಉಂಟುಮಾಡಿತ್ತು. ‘ಆ್ಯಡ್ ಮ್ಯಾನ್, ಮ್ಯಾಡ್ ಮ್ಯಾನ್’ ಕೃತಿ ಓದುತ್ತಾ ಹೋದಂತೆಲ್ಲ ಈ ವ್ಯಕ್ತಿಯ ಕುರಿತು ಇನ್ನಷ್ಟು–ಮತ್ತಷ್ಟು ತಿಳಿದುಕೊಳ್ಳಬೇಕು ಎಂಬ ಆಕಾಂಕ್ಷೆ ಮೂಡುತ್ತದೆ. ಅದಕ್ಕೇ ಕಕ್ಕರ್ ಅವರ ಮಾತಿನಲ್ಲೇ ಓದುಗರು ಹೇಳುವುದು ‘ಯೇ ದಿಲ್ ಮಾಂಗೇ ಮೋರ್’ ಎಂದು!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65